**ಪಾಠ-10** **ನವೆಂಬರ್ 28-ಡಿಸೆಂಬರ್ 4**

# ಕಲೆಗಳಲ್ಲಿ ಮತ್ತು ವಿಜ್ಞಾನಗಳಲ್ಲಿ ಶಿಕ್ಷಣ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ರೋಮ 1:18–21; ಕೀರ್ತನೆ 19:1–6; 96:9; ಆ.ಕಾ. 3:6; 1 ತಿಮೊಥಿ 6; ಜ್ಞಾ 1; ಯೋಬ 38.

**ಸ್ಮರಣವಾಕ್ಯ : "ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ. ಗಗನವು ಆತನ ಕೈಕೆಲಸವನ್ನು ತಿಳಿಸುತ್ತದೆ"** (ಕೀ 19:1).

ಶಿಕ್ಷಣದಲ್ಲಿ, "ಕಲೆಗಳೂ ಮತ್ತು ವಿಜ್ಞಾನಗಳೂ" ಸೇರ್ಪಡೆಗೊಂಡಿವೆ. ಆದರೆ, ಸತ್ಯವೇದದ ದೃಷ್ಟಿಕೋನದಿಂದ, ಕಲೆ ಮತ್ತು ವಿಜ್ಞಾನವನ್ನು ಬೋಧಿಸುವುದು ಎಂಬುದರ ಅರ್ಥವೇನು? ಈ ಪ್ರಶ್ನೆಗೆ ಉತ್ತರಿಸುವುದಕ್ಕಾಗಿ ಕೆಲವು ಸತ್ಯವೇದ ವಾಕ್ಯಗಳನ್ನು ಉಲ್ಲೇಖ ಮಾಡಿ, ಆಧುನಿಕ ಔಷಧಶಾಸ್ತ್ರ ಎಂದರೆ ಹೇಗೆ ಅಥವಾ ಕಲೆಯ ಇತಿಹಾಸ ಹಾಗೆ ಎಂದು ಹೇಳಿದರಷ್ಟೇ ಸಾಕೇ? ಹಾಗೇ ಮಾಡುವಾಗ, ನಮ್ಮ ಪ್ರಾಯೋಗಿಕ ಪಾಠಗಳನ್ನು, ನಮ್ಮ ಸಂಕೀರ್ಣ ಲೋಕವನ್ನು ಸೃಷ್ಟಿಸಿದ ಆಶ್ಚರ್ಯಕರ ದೇವರ ಬಲದೊಂದಿಗೆ ಸಂಬಂಧಿಸುತ್ತಿದೆವೆಯೇ? ಹೀಗೆಲ್ಲ ಮಾಡಿ, ಸತ್ಯವೇದವನ್ನು ಹತ್ತು ಪಠ್ಯಪುಸ್ತಕದೊಂದಿಗೆ, ಇದೂ ಸಹ ಒಂದು ಎಂದು ಸಂಯೋಜನೆ ಮಾಡಿಬಿಟ್ಟರೆ, ನಿಜವಾದ ಶಿಕ್ಷಣದಲ್ಲಿ ಅದರ ಪಾತ್ರ ಬಹಳ ಸಣ್ಣದಾಗಿಬಿಡುತ್ತದೆ. ಆದರೆ ಸತ್ಯವೇದ, ರಕ್ಷಣೆಯೆಡೆಗೆ ಮತ್ತು ವಿಮೋಚನೆಯೆಡೆಗೆ

---

**ಡಿಸೆಂಬರ್ 5ರ ಸಬ್ಬತ್ ಶಾಲೆಯ ಸಿದ್ಧತೆಗಾಗಿ ಈ ವಾರದ ಪಾಠವನ್ನು ಓದಿಕೊಳ್ಳಿ.**

ಮಾನವರನ್ನು ಕೈಯಿಡಿದು ನಡೆಸುವ, ಶಿಕ್ಷಣ ಕೊಡುವ ಪವಿತ್ರ ಗ್ರಂಥವಾಗಿದೆ.

ಇಂತಹ ಶಿಕ್ಷಣ ನಮ್ಮ ನಡುವೆ ಕೆಲಸ ಮಾಡಬೇಕೆಂದರೆ, ಮಾನವಿಕ ಶಾಸ್ತ್ರಗಳಿಂದ ಹಿಡಿದ್ದು ಅಣು-ಜೀವಶಾಸ್ತ್ರದವರೆಗೆ, ಜ್ಞಾನದ ಎಲ್ಲ ವಿಭಾಗಗಳಲ್ಲಿ ದೇವರವಾಕ್ಯದ ಬೋಧನೆಯ ಸೇರ್ಪಡೆಯಾಗಬೇಕು. ಸತ್ಯವೇದವಿಲ್ಲದಿದ್ದರೆ, ದೇವರ ಅಗಾಧತೆಯನ್ನೂ, ಮತ್ತು ಈ ಲೋಕದ ಸೃಷ್ಟಿಕರ್ತನೂ ಹಾಗು ಸಂರಕ್ಷಕನೂ ಆದ ಆತನ ಸಾರ್ವಭೌಮತ್ವದ ಒಳನೋಟವನ್ನು ಕಾಣಲಾಗದೆ ಹೋದೀತು. ದೇವರು ತನ್ನ ಸೃಷ್ಟಿಯನ್ನು, ಉದ್ದೇಶ ತುಂಬಿದ ಸೃಷ್ಟಿಯೆಂದು ಕಾಣುವುದು ಹೇಗೆ ಎಂಬುದನ್ನು ನಾವು ಕಲಿಯಬೇಕಾದರೆ, ಜ್ಞಾನದ ಕೆಲವು ಭಾಗಗಳನ್ನು ಹೇಗೆ ಬೋಧಿಸಬೇಕು ಎಂಬುದನ್ನು ಅರ್ಥಮಾಡಿಕೊಳ್ಳಬೇಕು.

ಕ್ರೈಸ್ತ ದೃಷ್ಟಿಕೋನ ಮತ್ತು ವಿಶ್ವ ದೃಷ್ಟಿಕೋನದ ಆಧಾರದ ಮೇಲೆ, ಕಲೆಗಳು ಮತ್ತು ವಿಜ್ಞಾನಗಳನ್ನು ಹೇಗೆ ಬೋಧನೆ ಮಾಡಬೇಕು ಎಂಬ ವಿಷಯಕ್ಕೆ ಸಂಬಂಧಿಸಿದ ಕೆಲವು ತತ್ವಗಳತ್ತ ಈ ವಾರ ನಮ್ಮ ಗಮನವನ್ನು ಹರಿಸೋಣ.

**ಭಾನುವಾರ** **ನವೆಂಬರ್, 29**

## ಕರ್ತನೂ ಮಾತ್ರವೇ....

ದೇವರ ಎಲ್ಲ ಸೃಷ್ಟಿಯಲ್ಲಿ, ಜೀವಂತ ದೇವರ ಸಾಕ್ಷ್ಯಗಳು ಎದ್ದು ಕಾಣುತ್ತವೆ. ಈ ವಾಕ್ಯ ಅದೆಷ್ಟು ಸಲ ಪುನರಾವರ್ತಿಸಲ್ಪಟ್ಟಿದೆಯೆಂದರೆ, ಅದು ಚರ್ವಿತ ಚರ್ವಣ (ನಿತ್ಯಪ್ರಯೋಗ ವಾಕ್ಸಂಪ್ರದಾಯ)ವಾಗಿಬಿಟ್ಟಿದೆ. ಈ ಪ್ರಪಂಚವನ್ನು ಸೃಷ್ಟಿಮಾಡಲು ದೇವರು ಮನಸ್ಸು ಮಾಡಿದ್ದನು, ಆದರೆ ಮನುಷ್ಯ ಈ ಸೃಷ್ಟಿಗೆ ಹಾನಿಯನ್ನುಂಟುಮಾಡಿ ಕುರೂಪಗೊಳಿಸಲು ಮುಂದಾದನು. ಈ ಎರಡು ಸಂಗತಿಗಳನ್ನು ಕುರಿತು ಆಳವಾಗಿ ಚಿಂತನೆ ಮಾಡಿದಾಗ, ಜ್ಞಾನದ ಭಾಗಗಳಾದ ಕಲೆಗಳು ಮತ್ತು ವಿಜ್ಞಾನಗಳನ್ನು ಏಕೆ ದೋಷರಹಿತವಾಗಿ ಬೋಧಿಸಬೇಕು ಎಂಬುದರ ಔಚಿತ್ಯವನ್ನು ಮನಗಾಣುತ್ತೇವೆ.

ಉದಾಹರಣೆಗೆ, ಮಾನವರ ಗರ್ಭಧಾರಣೆಯ ಅವಧಿಯನ್ನು ತೆಗೆದುಕೊಳ್ಳೋಣ. ನವಜಾತ ಶಿಶುವಿನ ಉದ್ಭವ ಫಲವತ್ತಾದ ಅಂಡಾಣುವಿನಿಂದ ಪ್ರಾರಂಭವಾಗಿ, ಒಂಭತ್ತು ತಿಂಗಳು, ಗರ್ಭಕೋಶದಲ್ಲಿ ಬೆಳೆಯುತ್ತದೆಯೆಂದು

ಜೀವಶಾಸ್ತ್ರ ಹೇಳುತ್ತದೆ. ಈ ಗರ್ಭಧಾರಣೆಯ ಅವಧಿಯುದ್ದಕ್ಕೂ ಪ್ರೀತಿಮಯವಾದ, ಸೃಷ್ಟಿಕರ್ತನಾದ ದೇವರ ಗುರುತನ್ನು ಕಾಣಬಹುದು. ಭ್ರೂಣ, ತಾಯಿಯ ಗರ್ಭದಲ್ಲಿ ಬೆಳೆಯುತ್ತಿರುವಾಗ, ಬಡಿದುಕೊಳ್ಳುತ್ತಿರುವ ತಾಯಿಯ ಹೃದಯದಲ್ಲಿ, ದೇವರ ಪ್ರೀತಿ ಮತ್ತು ಕರುಣೆಯನ್ನು ಕಾಣಬಹುದು. ಆ ಭ್ರೂಣ ದೊಡ್ಡದಾಗುತ್ತಿರುವುದಕ್ಕೆ ಅನುಗುಣವಾಗಿ ತಾಯಿಯ ಹೊಟ್ಟೆ ನಮ್ಮ ಕಣ್ಮುಂದೆಯೇ ದೊಡ್ಡದಾಗುತ್ತಿದೆಯೆಲ್ಲಾ! ಅದು ವಿಸ್ಮಯವೇ ಸರಿ! **ಶಿಶುವನ್ನು ನಿರೀಕ್ಷಿಸುತ್ತಿರುವ ತಾಯಿ, ತನ್ನೊಳಗೇ ಆ ಶಿಶುವಿರುವುದನ್ನು ಅನುಭವಿಸುತ್ತಾಳೆ. ಇದೇ ರೀತಿಯಲ್ಲಿ ನಮ್ಮ ಪರಲೋಕದ ತಂದೆ ನಮ್ಮನ್ನು ಯಾವಾಗಲೂ ಆತನಲ್ಲಿರುವಂತೆಯೇ ಅನುಭವಿಸುತ್ತಿರುತ್ತಾನೆ.**

ರೋಮ 1:18–21; ಕೀ 19:1–6 ಮತ್ತು ನೆಹೆಮೀಯ 9:6ನ್ನು ಓದಿಕೊಳ್ಳಿರಿ. ನಮ್ಮ ಸೃಷ್ಟಿಕರ್ತನಾಗಿ ದೇವರ ಕೆಲಸವೇನು ಎಂಬ ವಿಷಯದಲ್ಲಿ ಈ ವಾಕ್ಯಗಳು ನಮಗೆ ತಿಳಿಸುವುದೇನು?

ಆರು ಸಾವಿರ ಪಾಪದ ವರ್ಷಗಳ ನಂತರವೂ ಮತ್ತು ವಿನಾಶಕಾರಿ ಜಲಪ್ರಳಯ ಬಂದು ಹೋಗಿ ಸಾವಿರಾರು ವರ್ಷಗಳಾದರೂ ಅವುಗಳು ನಡೆದವು ಎಂಬುದಕ್ಕೆ ಬಲವಾದ ಸಾಕ್ಷಿಗಳು ಮಿತಿಮೀರಿ ದೊರಕಿವೆ, ದೇವರು ನಮ್ಮ ಸೃಷ್ಟಿಕರ್ತ ಎನ್ನುವ ಕಾರಣಕ್ಕಾಗಿ ಮಾತ್ರವಲ್ಲ, **ಸೃಷ್ಟಿಕರ್ತನಾದ ನಮ್ಮ ದೇವರು, ಪರಾಕ್ರಮಶಾಲಿ ಮತ್ತು ಪ್ರೀತಿಮಯಿ ಹಾಗೂ ಔದಾರ್ಯವುಳ್ಳ ದೇವರು ಎನ್ನುವ ಕಾರಣಕ್ಕಾಗಿಯೇ, ಅಗಾಧವಾದ ಪುರಾವೆಗಳು ಸಿಕ್ಕಿವೆ.** ಆತನು ಪರಾಕ್ರಮಿಯಾದ ದೇವರಾಗಿರುವುದರಿಂದಲೇ ಪೌಲ, ರೋಮ 1:18–21ರಲ್ಲಿ ಇಂತಹ ದೇವರನ್ನು ನಿರಾಕರಿಸುವವರು, ನ್ಯಾಯವಿಚಾರಣೆಯ ದಿನದಂದು– "ಉತ್ತರವಿಲ್ಲದವರಾಗಿದ್ದಾರೆ", ಯಾಕೆಂದರೆ ದೇವರನ್ನು ಕುರಿತು ಸಾಕಷ್ಟು ಪುರಾವೆಗಳು ಆತನ ಸೃಷ್ಟಿಯ ಮೂಲದಿಂದಲೇ ಕಾಣಸಿಗುತ್ತವೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅವರು– "ನಾನು ಮುಗ್ಧ, ನಾನು ಅಜ್ಞಾನಿ" ಎಂದು ಮನವಿ ಮಾಡಿಕೊಳ್ಳಲು ಸಾಧ್ಯವೇ ಇಲ್ಲ.

ವಿಶೇಷವಾಗಿ ಸೃಷ್ಟಿಕರ್ತನಿಗಿಂತ ಹೆಚ್ಚಾಗಿ ಮಾನವರು ಸೃಷ್ಟಿಯನ್ನು ಆರಾಧಿಸಲು ಬಂದಿರುವ ಈ ಯುಗದಲ್ಲಿ, ಅಸ್ತಿತ್ವದಲ್ಲಿರುವ ಎಲ್ಲದರ ಸೃಷ್ಟಿಕರ್ತನೂ ಮತ್ತು ಸುರಕ್ಷನೂ ಆಗಿರುವಾತನು ದೇವರೇ ಎಂಬ ಪರಿಕಲ್ಪನೆಯನ್ನು ಕಲೆಗಳಲ್ಲಿಯೂ ಮತ್ತು ವಿಜ್ಞಾನಗಳಲ್ಲಿಯೂ ತರಬೇಕಾದ ನಿರ್ಣಾಯಕ ಹಂತದಲ್ಲಿದೆ ಕ್ರೈಸ್ತೀಯ ಶಿಕ್ಷಣ. ಕೊನೆಯಲ್ಲಿ ಒಂದು ಮಾತನ್ನು ಹೀಗೆ ಹೇಳಬಹುದು: **ಯಾವುದೇ ವಿಚಾರಶಾಸ್ತ್ರ ಮತ್ತು ಪೂರ್ವಕಲ್ಪನೆ ದೇವರನ್ನು ನಿರಾಕರಿಸುವುದೇ ಆಗಲಿ ಅಥವಾ ತೊರೆಯುವುದನ್ನೇ ಆಗಲಿ ಮಾಡಿದರೆ, ಆ ವಿಚಾರಧಾರೆ ತಪ್ಪು ಮಾಡುವೆಡೆಗಷ್ಟೇ ಕೈಹಿಡಿದು ನಡೆಯಿಸಿಕೊಂಡು ಹೋಗುತ್ತದೆ. ಪ್ರಾಪಂಚಿಕವಾದ ಶಿಕ್ಷಣ ದೇವರಿಲ್ಲ ಎಂಬ ಪರಿಕಲ್ಪನೆಯನ್ನಷ್ಟೇ ಪ್ರತಿಪಾದಿಸುತ್ತವೆ. ಕ್ರೈಸ್ತೀಯ ಶಿಕ್ಷಣ ಆ ಮೋಸದ ಬಲೆಗೆ ಸಿಕ್ಕಿಹಾಕಿಕೊಳ್ಳಬಾರದು, ಅಷ್ಟೇ ಅಲ್ಲ ಬಹಳ ಕುತಂತ್ರದಿಂದ ದೇವರಿಲ್ಲ ಎಂಬ ತತ್ವಗಳ ಆಧಾರದ ಮೇಲೆ ಕೌಶಲ್ಯದಿಂದ ಕೆಲಸ ಮಾಡುವ ಮಾಧ್ಯಮಗಳ ಜೊತೆ ಕೈಜೋಡಿಸಲೂ ಬಾರದು.** ಈ ಎರಡೂ ಪರಿಕಲ್ಪನೆಗಳು ಮನುಷ್ಯರನ್ನು "ತಪ್ಪು ದ್ರೋಹ" ಎಂಬ ತಂತಿಯಿಂದ ಕಟ್ಟಿಹಾಕುವ ಸಾಧ್ಯತೆಗಳಿವೆ, ಎಚ್ಚರ!

**ಪಾಪದ ನಂತರವೂ ನಮ್ಮ ಪ್ರಪಂಚದಲ್ಲಿರುವ, ಬೆಲೆ ಕಟ್ಟಲಾಗದ, ವಿಸ್ಮಯ ಹಾಗು ಸೌಂದರ್ಯಗಳನ್ನು ಕುರಿತು ಚಿಂತನೆ ನಡೆಸಿರಿ. ವಿಶೇಷವಾಗಿ ವೈಯಕ್ತಿಕವಾಗಿ ತಾಪತ್ರಯ ಮತ್ತು ಸಂಕಷ್ಟಗಳ ನಡುವೆಯೂ, ಮೇಲಿನ ಆಲೋಚನೆಗಳಿಂದ ನಿರೀಕ್ಷೆಯನ್ನು ಮತ್ತು ಸಮಾಧಾನವನ್ನು ಕಂಡುಕೊಳ್ಳುವುದು ಹೇಗೆ?**

**ಸೋಮವಾರ** **ಆಗಸ್ಟ್ 31**

## ಪರಿಶುದ್ಧತ್ವವೆಂಬ ಭೂಷಣ

**ಕೀರ್ತನೆ 96:9 "ಪರಿಶುದ್ಧತ್ವವೆಂಬ ಭೂಷಣದೊಡನೆ ಯೆಹೋವನಿಗೆ ನಮಸ್ಕರಿಸಿರಿ"**

"ಪರಿಶುದ್ಧತ್ವವೆಂಬ ಭೂಷಣ" ಎಂಬ ಪರಿಕಲ್ಪನೆಯನ್ನು **ಅರ್ಥ ಮಾಡಿಕೊಳ್ಳುವುದು ಹೇಗೆ? ಒಬ್ಬ ಕ್ರೈಸ್ತನಿಗೆ ಆ ಅರ್ಥ ಏನನ್ನಿಸುತ್ತದೆ? ಯಾವಾಗಲೂ ಒಂದಕ್ಕೊಂದು ಬೆಸೆದುಕೊಂಡಿರುವ, ಕಲೆ ಮತ್ತು ಸೌಂದರ್ಯವನ್ನು ಕುರಿತು ನಾವು ಮಾಡುವ ಬೋಧನೆ ಯಾವ ಪರಿಣಾಮ ಬೀರಬಹುದು?**

"**ನೋಡುಗನ ಕಣ್ಣುಗಳಿಲ್ಲದೆ ನೋಟದ ಸೌಂದರ್ಯ**" ಎಂಬ ನಾಣ್ಣುಡಿಯುಂಟು. ಆದರೆ ಹೀಗೆ ಹೇಳುವಾಗ ಆ ನೋಟದ ಕಣ್ಣುಗಳನ್ನು ಸೃಷ್ಟಿಸಿದವರ್ಯಾರೆಂಬುದನ್ನು ಮರೆಯಬಾರದು (ನೋಡಿ: ಜ್ಞಾ 20:12). ಸೃಷ್ಟಿಯನ್ನು ಆರಾಧಿಸಬಾರದು ಎಂಬ ವಿಷಯದಲ್ಲಿ ನಾವು ತುಂಬಾ ಎಚ್ಚರಿಕೆಯಿಂದಿರಬೇಕು (ನಿನ್ನೆಯ ಪಾಠವನ್ನು ಜ್ಞಾಪಿಸಿಕೊಳ್ಳಿ). ಸೃಷ್ಟಿಯಲ್ಲಿರುವ ಸೌಂದರ್ಯದ ಮೂಲಕ ನಾವು ದೇವರನ್ನು ಕುರಿತು ಕಲಿಯಬಹುದು. ಆತನ ಪ್ರೀತಿಯು ಸೌಂದರ್ಯವಾದುದು. ಇಂದು ಅಧಃಪತನಗೊಂಡಿರುವ ಈ ಭೂಮಿ ಸುಂದರವಾಗಿವುದಾದರೆ, ಅಧಃಪತನಕ್ಕೊಳಗಾಗದಿದ್ದಾಗ ಈ ಭೂಮಿಗಿದ್ದ ಸೌಂದರ್ಯವನ್ನು ನೀವು ಕಲ್ಪನೆ ಮಾಡಿನೋಡಬಲ್ಲಿರಾ? ಇಂತಹ ಕಲ್ಪನೆ, ದೇವರೇ ಸೌಂದರ್ಯದ ಸೃಷ್ಟಿಕರ್ತನೆಂದು ಬೋಧಿಸುತ್ತದೆ.

ಕಲೆ ಮತ್ತು ವಿಜ್ಞಾನಗಳ ಅಧ್ಯಯನ ದೇವರ ಚಾರಿತ್ರ್ಯ (ನಡೆ) ಮತ್ತು ದೇವರ ಹೃದಯಕ್ಕೆ ನಮ್ಮನ್ನು ಅತ್ಯಂತ ಸಮೀಪವಾಗಿಸಬೇಕು. ಯಾಕೆಂದರೆ ನಾವೂ ಸಹ ದೇವರ ಸ್ವಂತ ಕಲೆಯ ಸೃಷ್ಟಿಯ ಮತ್ತು ವೈಜ್ಞಾನಿಕ ಅದ್ಭುತಗಳ ಒಂದು ಭಾಗವಾಗಿದ್ದೇವೆ. ಹೀಗಾಗಿ ನಾವು ಸಹ ಕ್ರಿಸ್ತನಲ್ಲಿ ನಮ್ಮ ಅನ್ಯೋನ್ಯತೆಯನ್ನೂ ಕುರಿತು ಕಲಿಯಬಹುದಾಗಿದೆ.

"ದೇವರು, ತನ್ನ ಮಕ್ಕಳು, ತನ್ನ ಸೃಷ್ಟಿಯ ಕೆಲಸವನ್ನು ಮೆಚ್ಚುತ್ತಾರೆ ಮತ್ತು ಅವರ ವಾಸಸ್ಥಳವಾದ ಈ ಭೂಮಿಯನ್ನು ಸರಳವಾಗಿಯೂ ಮತ್ತು ಸುಂದರವಾಗಿಯೂ ಸೃಷ್ಟಿಸಿಕೊಟ್ಟಿದ್ದಕ್ಕಾಗಿ ಉಲ್ಲಾಸಿಸುತ್ತಾರೆ ಎಂದುಕೊಂಡಿದ್ದಾನೆ. ಆತನು ಸೌಂದರ್ಯ ಪ್ರಿಯನು; ಎಲ್ಲಕ್ಕಿಂತ ಹೆಚ್ಚಾಗಿ ಬಾಹ್ಯ ಸೌಂದರ್ಯವನ್ನು ಮೆಚ್ಚುವದಕ್ಕಿಂತ ಹೆಚ್ಚಾಗಿ, ಆಂತರ್ಯದ ಸೌಂದರ್ಯವನ್ನು ಪ್ರೀತಿಸುವವನಾಗಿದ್ದಾನೆ. ಆತನ ಕೃಪೆಯ ಕುಸುಮಗಳಂತಿರುವ ಪಾವಿತ್ರ್ಯತೆ ಮತ್ತು ಸರಳ ಸೌಮ್ಯತೆಯನು ನಮ್ಮಲ್ಲಿ ಕೃಷಿ ಮಾಡುಕೊಳ್ಳುವುದಕ್ಕೂ ಆತ ಬಯಸುವವನಾಗಿದ್ದಾನೆ"– ಎಲೆನ್ ಜಿ ವೈಟ್, ಸ್ಟೆಪ್ಸ್ ಟು ಕ್ರೈಸ್ಟ್, ಪುಟ 85.

ಆ.ಕಾ. 3:6ನ್ನು ಓದಿಕೊಳ್ಳಿರಿ. ಸೌಂದರ್ಯವಷ್ಟೇ ಇದ್ದರೆ ಸಾಲದು, ಅದು ಒಳ್ಳೆಯದೋ ಅಥವಾ ಪವಿತ್ರವಾದದ್ದೋ ಆಗಿರಲೇಬೇಕೆಂದೆನಿಲ್ಲ ಎಂಬ ವಿಷಯದಲ್ಲಿ ಈ ವಾಕ್ಯದ ಬೋಧನೆಯೇನು?

________________________________________

________________________________________

ದೇವರು ಒಂದು ಕಡೆಯಿಂದ ಎಲ್ಲವನ್ನು ಸೃಷ್ಟಿಸಿಕೊಂಡು ಬಂದರೆ, ಸೈತಾನ ಇನ್ನೊಂದು ಕಡೆಯಿಂದ ಆ ಸೃಷ್ಟಿಯನ್ನು ವಿರೂಪಗೊಳಿಸುತ್ತಾ, ಅದರ ದುರ್ಲಾಭ ಪಡೆದುಕೊಳ್ಳುತ್ತಾ ಬರುತ್ತಾನೆ. ಹೀಗಾಗಿ ಸೌಂದರ್ಯ ಮತ್ತು ಸೌಂದರ್ಯದ ಪರಿಕಲ್ಪನೆಯನ್ನು ನಮಗೆ ವಿರುದ್ಧವಾಗಿ ಬಳಸಿದರೆ, ಅದರಲ್ಲಿ ಆಶ್ಚರ್ಯಪಡುವುದಕ್ಕೆ ಏನೂ ಇರುವುದಿಲ್ಲ. ಆದ್ದರಿಂದ, ವಿಶೇಷವಾಗಿ ಕಲೆಯನ್ನು ಕುರಿತು ಅಧ್ಯಯನ ಮಾಡುವಾಗ, ಕ್ರೈಸ್ತೀಯ ಶಿಕ್ಷಣಕ್ಕೆ ಸತ್ಯವೇದವೇ ಮಾರ್ಗದರ್ಶಿಯಾಗಿರಬೇಕು. ಇಂತಹ ಮಾರ್ಗದರ್ಶನ ಸುಂದರವಾಗಿರುವದೆಲ್ಲ ಅವಶ್ಯವಾಗಿ ಒಳ್ಳೆಯುವಾಗಿರಬೇಕು ಅಥವಾ ಪವಿತ್ರವಾಗಿರಬೇಕು ಎಂದು ಅರ್ಥ ಮಾಡಿಕೊಳ್ಳಬಾರದು ಎಂಬುದನ್ನು ಕಲಿಸುವುದಕ್ಕೆ ಸಹಾಯಕವಾಗಿದೆ.

ಕೆಲವೊಂದು ವಸ್ತುಗಳು "ಸುಂದರ"ವಾಗಿದ್ದರೂ, ಅವು ಅವಶ್ಯವಾಗಿ ಒಳ್ಳೆಯದಾಗಿರಬೇಕು. ಅಥವಾ ಪವಿತ್ರವಾಗಿರಬೇಕೆಂದೇನಿಲ್ಲ ಎಂಬುದಕ್ಕೆ ಕೆಲವು ಉದಾಹರಣೆಗಳನ್ನು ಕೊಡಿರಿ ಅಥವಾ ಯಾವ ಸುಂದರವಾದ ವಸ್ತುಗಳನ್ನು ನಾವು ಸಂದರ್ಭಕ್ಕನುಸಾರವಾಗಿ ಅಪವಿತ್ರಗೊಳಿಸಬಹುದು ಮತ್ತು ಕೆಡಿಸಬಹುದು? ಈ ವ್ಯತ್ಯಾಸಗಳನ್ನು ಕಂಡುಕೊಳ್ಳಲು ನಾವು ಬಳಸಬಹುದಾದ ಮಾನದಂಡವೇನು?

**ಮಂಗಳವಾರ** **ಡಿಸೆಂಬರ್ 1**

## ತಪ್ಪುಮಾಡುವುದರಲ್ಲಿ ನಿಪುಣತೆ

ದೇವರನ್ನು ಮಹಿಮೆಪಡಿಸದ ಎಷ್ಟೋ ಕಲೆಗಳು ಮತ್ತು ತತ್ವಶಾಸ್ತ್ರಗಳು ಈ ಲೋಕದಲ್ಲಿವೆ ಎಂದು ನಮಗೆ ಗೊತ್ತು. ಕ್ರೈಸ್ತರು ಇಂತಹ ಶಾಸ್ತ್ರಗಳ ಗುಡಾರವನ್ನು ಪ್ರವೇಶಿಸಬಾರದು ಎಂಬ ಚರ್ಚೆ ಕ್ರೈಸ್ತರ ನಡುವೆ ಇರುವುದುಂಟು. ಸೆವೆಂತ್-ಡೇ ಅಡ್ವೆಂಟಿಸ್ಟ್ ಕ್ರೈಸ್ತರುಗಳು ಕೆಲವು ಕಾರ್ಖಾನೆ/ ಕೈಗಾರಿಕೆಗಳಲ್ಲಿ ವ್ಯವಹಾರ

ಮಾಡಬೇಕಾಗಿ ಬಂದಾಗ, ಕೆಲವೊಂದು ಸಂಘ–ಸಂಸ್ಥೆಗಳಿಗೆ ಆಶ್ರಯಕೊಡುವುದು ಅಥವಾ ಪೋಷಿಸಬೇಕಾಗಿ ಬಂದಾಗ, ಕೆಲವೊಂದು ಮಾಧ್ಯಮಗಳನ್ನು ಬಳಸಿಕೊಳ್ಳಬೇಕಾದಾಗ ತುಂಬಾ ಎಚ್ಚರಿಕೆಯಿಂದ ನಡೆದುಕೊಳ್ಳಬೇಕು.

**1 ತಿಮೊಥಿ 6ನೇ ಅಧ್ಯಾಯದಲ್ಲಿ ಏನು ಮಾಡಬೇಕು ಮತ್ತು ಏನು ಮಾಡಬಾರದು ಎಂಬುದಕ್ಕೆ ಸಾಕಷ್ಟು ವಿವರಣೆಗಳನ್ನು ಕೊಡಲಾಗಿದೆ. 1 ತಿಮೊಥಿ 6:9,10ರಲ್ಲಿ ಯಾವ ವಿಷಯದಲ್ಲಿ ಪೌಲ ಎಚ್ಚರಿಸಿದ್ದಾನೆ?**

______________________________

______________________________

**1 ತಿಮೊಥಿ 6ನೇ ಅಧ್ಯಾಯವನ್ನು ಸಂಪೂರ್ಣವಾಗಿ ಓದಿಕೊಳ್ಳಿರಿ. ಪೌಲ ಇಲ್ಲಿ ಯಾವ ಯಾವ ವಿಷಯಗಳ ಬಗ್ಗೆ ತನ್ನ ದೃಢೀಕರಣವನ್ನು ವ್ಯಕ್ತಪಡಿಸಿದ್ದಾನೆ?**

______________________________

______________________________

1 ತಿಮೊಥಿ 6:20ರಲ್ಲಿ ಪೌಲನು "ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆ"ಯ ವಿರುದ್ಧ ಎಚ್ಚರಿಸಿದ್ದಾನೆ. ಪೌಲನ ಕೆಲಸ ಸನ್ನಿವೇಶ ಬೇರೆಯೇ ಆಗಿದ್ದರೂ, ಅವನು ಇಲ್ಲಿ ಪ್ರತಿಪಾದಿಸುವ ತತ್ವಗಳು ಎಲ್ಲರಿಗೂ ಅನ್ವಯವಾಗುವಂತದ್ದೇ ಸರಿ. ಅಂದರೆ: ಈ ವಾಕ್ಯಗಳಲ್ಲಿ ಲಭ್ಯವಾಗುವ ಮಾಹಿತಿ ಎಲ್ಲ ಬೋಧನೆ, ಎಲ್ಲ ಲಾಭಗಳು, ಇತಿಹಾಸದುದ್ದಕ್ಕೂ ಹೇಗೆ ತಪ್ಪುಒಪ್ಪುಗಳು ನಡೆದುಕೊಂಡು ಬಂದಿವೆ ಎಂಬುದನ್ನು ತಿಳಿಸಿಕೊಡುತ್ತವೆ. ಈ ಹಿನ್ನೆಲೆಯಲ್ಲಿ ಜನ ತಪ್ಪುಮಾಡುವುದರಲ್ಲೂ ನಿಪುಣರು ಎಂದು ಹೇಳಲಾಗಿದೆಯಷ್ಟೆ.

ಸುಮಾರು 200 ವರ್ಷಗಳ ಕಾಲ, ಪ್ರಪಂಚದ ಬುದ್ಧಿವಂತ ಜನರು ನಿಪುಣರು, ಭೂಮಿಯು, ಈ ವಿಶ್ವದ ಮಧ್ಯದಲ್ಲಿ ಅಚಲವಾಗಿ ನಿಂತಿದೆ. ಉಳಿದೆಲ್ಲ ನಕ್ಷತ್ರಗಳು ಮತ್ತು ಗ್ರಹಗಳು ಅದರ ಸುತ್ತ ಪರಿಪೂರ್ಣ ವರ್ತುಲ ಕಕ್ಷೆಯಲ್ಲಿ ಸುತ್ತುತ್ತವೆ ಎಂದು ನಂಬಿದ್ದರು. ಈ ನಂಬಿಕೆಯನ್ನು ಬೆಂಬಲಿಸಲು ಬಹಳ ಸಂಕೀರ್ಣವಾದ ಗಣಿತಶಾಸ್ತ್ರ ಮತ್ತು ವಿಜ್ಞಾನಶಾಸ್ತ್ರಗಳನ್ನು ಬಳಸಿಕೊಳ್ಳಲಾಗಿತ್ತು. ಇದು ತಪ್ಪು ಎಂದು ಗೊತ್ತಿದ್ದರೂ ಆ ಕಾಲಕ್ಕೆ ಈ ನಂಬಿಕೆ ಪ್ರಚಲಿತದಲ್ಲಿತ್ತು. ಆದ್ದರಿಂದಲೇ

ನಾವು ಈ ಜನರು ತಪ್ಪುಮಾಡುವುದರಲ್ಲೂ ತಮ್ಮ ನಿಪುಣತೆಯನ್ನು ಮೆರೆದಿದ್ದರು ಎಂದು ಹೇಳುವುದು. ಇಂತಹ ಬೋಧನೆಯನ್ನೇ ಪೌಲ– "ಜ್ಞಾನೋಪದೇಶವೆಂದು ಸುಳ್ಳಾಗಿ ಹೇಳಿಕೊಳ್ಳುವ ಬೋಧನೆ" ಎಂದು ಖಂಡಿತವಾಗಿ ಹೇಳಿದ್ದನು.

**ಜೈವಿಕ ಶಾಸ್ತ್ರ, ಇಂದು, ಜೀವಿಗಳ ಕೋಟ್ಯಾನುಕೋಟಿ ವರ್ಷಗಳ ಇಂದೆ ಇದ್ದಕ್ಕಿದ್ದಂತೆ ತಾನೇ ತಾನಾಗಿ, ದೇವರು ಮತ್ತು ಆತನ ಉದ್ದೇಶಗಳೇನು ಇಲ್ಲದೆ, ಅಸ್ತಿತ್ವಕ್ಕೆ ಬಂದವು ಎಂಬ ಊಹೆಯನ್ನು ಪ್ರತಿಪಾದಿಸುತ್ತಿದೆ. ಇದೇ ಸಮಯದಲ್ಲಿ ಈ ಬೋಧನೆಯನ್ನು ಅನುಸರಿಸಿ, ನಾವು ನಂಬಲಿಕ್ಕಾಗದಷ್ಟು ಸಂಕೀರ್ಣವಾದ ಹಾಗು ವಿವರವಾದ ವೈಜ್ಞಾನಿಕ ಸಾಹಿತ್ಯ ಪುಸ್ತಕಗಳ ರೂಪದಲ್ಲಿ ಹೊರಬಂದಿವೆ. ಜನ ತಪ್ಪುಮಾಡುವುದರಲ್ಲೂ ನಿಪುಣರು ಎಂಬ ವಿಷಯಕ್ಕೆ ಕುರಿತಂತೆ ಇಲ್ಲಿ ನಾವು ಕಲಿಯಬಹುದಾದ ಪಾಠವೇನು? ಇಂದು ನಾವು ಕಲಿತ ಪಾಠ, ಕ್ರೈಸ್ತೀಯ ಶಿಕ್ಷಣ ಮತ್ತು ವಿಜ್ಞಾನ ಬೋಧನೆಯ ಮೇಲೆ ಬೀರುವ ಪರಿಣಾಮವೇನು?**

**ಬುಧವಾರ** **ಡಿಸೆಂಬರ್ 2**

## ಮೂರ್ಖತನ ಮತ್ತು ಬುದ್ಧಿವಂತಿಕೆ

**ಜ್ಞಾನೋಕ್ತಿ 1ನೇ ಅಧ್ಯಾಯವನ್ನು ಓದಿಕೊಳ್ಳಿರಿ. ನಿಜವಾದ ಕ್ರೈಸ್ತೀಯ ಶಿಕ್ಷಣ ಏನಾಗಿರಬೇಕು ಎಂಬುದಕ್ಕೆ ಈ ಅಧ್ಯಾಯ ಬೋಧಿಸುವುದೇನು?**

ಸತ್ಯವೇದ, ಮೂರ್ಖತನ ಮತ್ತು ಬುದ್ಧಿವಂತಿಕೆ ನಡುವಿನ ಒಂದು ನಿಶ್ಚಲವಾದ ಹೋಲಿಕೆಯ ಗೆರೆಯನ್ನು ಎಳೆದಿದೆ. ಜ್ಞಾನೋಕ್ತಿಯ ಪುಸ್ತಕದ, ಅವಿವೇಕತನದ ನಡೆ ಮತ್ತು ಮೂರ್ಖರ ಸಂಗಡ ಒಡನಾಟ ಇಟ್ಟುಕೊಳ್ಳುವವರಿಗಾಗುವ ಅಪಾಯವನ್ನು ನಮ್ಮ ನೆನಪಿಗೆ ತಂದುಕೊಡುತ್ತಿದೆ. ಇವುಗಳ ನಡುವಿನ ವ್ಯತ್ಯಾಸ ಸುಸ್ಪಷ್ಟ: ದೇವರು, ಜನರು ಜ್ಞಾನವನ್ನು ಹುಡುಕುವುದು, ಅದನ್ನು ಸಮೃದ್ಧಿಯಾಗಿ ಸಂಪಾದಿಸುವುದು ಮತ್ತು ಅದನ್ನು ನಿಧಿ–ನಿಕ್ಷೇಪದಂತೆ ಕಾಪಾಡಿಕೊಳ್ಳುವುದನ್ನು ಬಯಸುವವನಾಗಿದ್ದಾನೆ.

ಕಲೆ ಮತ್ತು ವಿಜ್ಞಾನ ಶಾಸ್ತ್ರಗಳ ವಿದ್ಯಾರ್ಥಿಗಳು ತಮ್ಮ ಪ್ರತಿಭೆಗಳನ್ನು

ಬಳಸಿಕೊಂಡು ಜ್ಞಾನಾರ್ಜನೆ ಮಾಡುತ್ತಾರೆ ಮತ್ತು ತಮ್ಮ ವ್ಯಾಸಂಗದಲ್ಲಿ ಅತ್ಯುತ್ತಮ ಸಾಧನೆಗಾಗಿ ಅದನ್ನು ಬೆನ್ನಟ್ಟುವರು. ಜ್ಞಾನದ ಈ ವಿಭಾಗಗಳನ್ನು ಬೋಧನೆ ಮಾಡುವ ಗುರುವರ್ಯರೂ ಸಹ ಅವರಂತೆಯೇ ಇದ್ದಾರೆ. ಜ್ಞಾನ ಮತ್ತು ಸಾಮರ್ಥ್ಯ ಶಕ್ತಿಯ ನಿಮಿತ್ತ ನಾವು, ಕಲಾನೈಪುಣ್ಯ ಮತ್ತು ವೈಜ್ಞಾನಿಕ ಅದ್ಭುತ ಪ್ರಗತಿಯನ್ನು ಸಾಧಿಸಬಹುದು.

ಕಲೆ ಮತ್ತು ವಿಜ್ಞಾನಗಳ ಮೂಲದಿಂದ ಪಡೆದುಕೊಂಡ ಜ್ಞಾನ–ಸರಿ ಮತ್ತು ತಪ್ಪು, ಒಳ್ಳೆಯದು ಮತ್ತು ಕೆಟ್ಟದ್ದು, ಸತ್ಯ ಮತ್ತು ಸುಳ್ಳುಗಳ ನಡುವಿನ ವ್ಯತ್ಯಾಸವನ್ನು ತಿಳಿಸಿಕೊಡದಿದ್ದರೆ, ಅಂತಹ ಜ್ಞಾನದಿಂದ ಪ್ರಯೋಜನವೇನು ಎಂಬುದು ಕ್ರೈಸ್ತೀಯ ದೃಷ್ಟಿಕೋನವಾಗಿದೆ. ಆದ್ದರಿಂದ ಇಲ್ಲಿ ಒಬ್ಬರು ಮಾಡಬೇಕಾದ್ದು ಇಷ್ಟೇ: ಪ್ರಪಂಚ ಅತ್ಯಂತ ಗಣ್ಯರೆಂದು ಗುರುತಿಸಲ್ಪಟ್ಟ ಕಲೆಗಾರರ ಜೀವನ ಚರಿತ್ರೆಯನ್ನು ಓದಿರಿ. ಅವರಿಗಿದ್ದ ಅಭೂತಪೂರ್ವ ಕೌಶಲ್ಯ ಮತ್ತು ಪ್ರತಿಭೆಯನ್ನು, ಅವರ ನೈತಿಕ ಅಥವಾ ಸತ್ಯಸಂಧ ಜೀವನದೊಂದಿಗೆ ಸರಿಸಮಾನವಾಗಿದೆಯೇ ಎಂಬುದನ್ನು ಪರಿಶೀಲಿಸಿ ನೋಡಿರಿ. ಜೈವಿಕ ಅಥವಾ ರಸಾಯನಿಕ ಯುದ್ಧಾಯುಧಗಳ ಅನ್ವೇಷಣೆ ಮಾಡುವ ಮಹಾ ಮೇಧಾವಿಗಳಾದ ವಿಜ್ಞಾನಿಗಳ ಕೆಲಸ ಜನಸಮೂಹಗಳನ್ನು ನಾಶಮಾಡುತ್ತವೆ. ಈ ವಿಜ್ಞಾನಿಗಳು ಉನ್ನತ ವ್ಯಾಸಂಗ ಮಾಡಿದವರೂ ಮತ್ತು ದೈವದತ್ತ ವರಪಡೆದುಕೊಂಡವರೂ ಆಗಿದ್ದಾರೆ ನಿಜ. ಆದರೆ ಅವರ ವೈಜ್ಞಾನಿಕ ಸಾಧನೆಯ ಫಲವೇನು? ಆದ್ದರಿಂದಲೇ, ಮೇಲೆ ಮೊದಲೇ ಹೇಳಿದ ಹಾಗೆ, ಜ್ಞಾನ ತನ್ನಷ್ಟಕ್ಕೆ ತಾನೇ ಅವಶ್ಯವಾಗಿ ಒಳೆಯದಾಗಿರಬೇಕೆಂದಿನಿಲ್ಲ.

**ಜ್ಞಾನೋಕ್ತಿ 1:7ನ್ನು ಓದಿಕೊಳ್ಳಿರಿ. ನಿಜವಾದ ಕ್ರೈಸ್ತೀಯ ಶಿಕ್ಷಣದ ಕಿಲಿಕೈ ಯಾವುದು ಎಂಬುದನ್ನು ಈ ವಚನ ತಿಳಿಸಿಕೊಡುವುದು ಹೇಗೆ?**

______________________________

______________________________

**ಒಬ್ಬ ನೊಬಲ್ ಪಾರಿತೋಷಕ ವಿಜೇತನೂ, ನಾಸ್ತಿಕನೂ, ವಿಶ್ವವನ್ನೂ ಮತ್ತು ಅದರ ಹಿಂದಿರುವ ಭೌತಿಕ ಬಲಗಳನ್ನು ಕುರಿತು ಅಧ್ಯಯನ ಮಾಡಿದ ವ್ಯಕ್ತಿ "ವಿಶ್ವವನ್ನು ಗ್ರಹಿಸಿಕೊಳ್ಳಬಹುದು ಎಂದು ಹೆಚ್ಚಾಗಿ ಅನ್ನಿಸುವಾಗ, ಅದು ಅಷ್ಟೇ ವಿಷಯ ರಹಿತವಾದದ್ದೂ ಸಹ" ಎಂದು ಬರೆದಿದ್ದಾನೆ. ಜ್ಞಾನವು ತನ್ನಷ್ಟಕ್ಕೆ ತಾನೇ**

**ಅರ್ಥರಹಿತವಾಗಿರುವುದು ಮಾತ್ರವಲ್ಲ, ಆದರೆ, ಅದಕ್ಕಿಂತಲೂ ಅತ್ಯಂತ ಕೆಟ್ಟದಾದದ್ದು ಮತ್ತು ತಪ್ಪುಮಾಡುವೆಡೆಗೆ ಕೈಹಿಡಿದು ನಡೆಸುತ್ತದೆ ಎಂಬ ಅಭಿಪ್ರಾಯದ ವಿಷಯದಲ್ಲಿ ಈ ಹೇಳಿಕೆ ನಮಗೆ ಹೇಳುವುದೇನು?**

**ಗುರುವಾರ** **ಡಿಸೆಂಬರ್ 3**

## ಕರ್ತನಾದ ದೇವರು ಯೋಬನಿಗೆ ಉತ್ತರಿಸಿದ್ದು

**ಯೋಬನ ಪುಸ್ತಕದ 38ನೇ ಅಧ್ಯಾಯವನ್ನು ಓದಿಕೊಳ್ಳಿರಿ. ದೇವರು ನಮ್ಮ ಸೃಷ್ಟಿಕರ್ತನು ಮಾತ್ರವಲ್ಲ, ಆತನು ನಮ್ಮ ಸಂರಕ್ಷಕನೂ ಸಹ ಹೌದು ಎಂಬ ವಿಷಯಕ್ಕೆ ಸಂಬಂಧಿಸಿದಂತೆ ಈ ವಾಕ್ಯಗಳು ನಮಗೆ ಬೋಧಿಸುವುದೇನು? ಇಂತಹ ಬಹುಮುಖ್ಯವಾದ ಸತ್ಯವು, ನಮ್ಮ ಕಲೆಗಳ ಮತ್ತು ವಿಜ್ಞಾನಗಳ ಅರ್ಥಗ್ರಹಿಕೆಯ ಮೇಲೆ ಪರಿಣಾಮ ಬೀರುವುದು ಹೇಗೆ?**

ಅನೇಕರು ಭೌತದ್ರವ್ಯದಲ್ಲಿ ಭಯಂಕರವಾದ ಶಕ್ತಿಯಡಗಿದೆ ಎಂದು ಬೋಧಿಸುತ್ತಾರೆ. ಆ ಭೌತದ್ರವ್ಯಕ್ಕೆ ಕೆಲವೊಂದು ಗುಣಲಕ್ಷಣಗಳಿವೆ. ನಂತರದಲ್ಲಿ ಅದು ತನ್ನಲ್ಲಿ ಅಡಗಿರುವ ಶಕ್ತಿಯನ್ನು ಉಪಯೋಗಿಸಿಕೊಂಡು ತನಗೆ ಬೇಕಂತೆ ನಡೆದುಕೊಳ್ಳುತ್ತದೆ. ಪ್ರಕೃತಿಗೆ ಒಂದು ಗೊತ್ತಾದ ನಿಯಮಗಳನ್ನು ನೇಮಿಸಲಾಗಿದೆ. ಆ ನಿಯಮಗಳನ್ನು ಅನುಸರಿಸಿ ಅದು ತನ್ನ ಪಾಡಿಗೆ ತಾನೇ ನಡೆದುಕೊಂಡು ಹೋಗುತ್ತಿರುತ್ತದೆ. ದೇವರೂ ಕೂಡ ಅದಕ್ಕೆ ಅಡ್ಡಿಬರುವಂತಿಲ್ಲ ಎಂದು ಹೇಳಲಾಗಿದೆ. ಇದು ಸುಳ್ಳಾದ ವಿಜ್ಞಾನ. ಈ ವಿಜ್ಞಾನಕ್ಕೆ ದೇವರ ವಾಕ್ಯದ ಆಧಾರವಿಲ್ಲ. ಪ್ರಕೃತಿ, ದೇವರ ಸೇವಕನಷ್ಟೇ.... ಪ್ರಕೃತಿಯು, ಒಂದು ಬೌಧಿಕತೆಗೆ, ಒಂದು ದೇವರ ಅಸ್ತಿತ್ವಕ್ಕೆ, ಒಂದು ಚಾಲನೆಯಲ್ಲಿರುವ ಶಕ್ತಿಗೆ, ತನ್ನಲ್ಲಿ ಮತ್ತು ತನ್ಮೂಲಕ ಕೆಲಸ ಮಾಡುವ ನಿಯಮಗಳಿಗೆ ಸಾಕ್ಷಿಯಾಗಿದೆಯಷ್ಟೇ. ತಂದೆ ಮತ್ತು ಮಗನು ಸತತವಾಗಿ ಕೆಲಸ ಮಾಡುತ್ತಿರುವುದನ್ನು ಪ್ರಕೃತಿಯಲ್ಲಿ ಕಾಣುತ್ತೇವೆ. ಯೇಸುಕ್ರಿಸ್ತನು– "**ನನ್ನ ತಂದೆಯು ಇಂದಿನವರೆಗೂ ಕೆಲಸ ಮಾಡುತ್ತಾನೆ, ನಾನೂ ಕೆಲಸ ಮಾಡುತ್ತೇನೆ ಅಂದನು**" ಯೋಹಾನ 5:17– ಎಲೆನ್ ಜಿ ವೈಟ್, ಪ್ಯಾಟ್ರಿಯಾರ್ಕ್ಸ್ ಅಂಡ್ ಪ್ರಾಫೆಟ್ಸ್, ಪುಟ 114.

ದುರಾದೃಷ್ಟವಶಾತ್, ಮೊದಲೇ ಹೇಳಿದಂತೆ, ವಿಜ್ಞಾನ ಬಹಳಷ್ಟು ನಾಸ್ತಿಕತೆ, ಭೌತಿಕ ಪೂರ್ವಕಲ್ಪನೆಯ ಆಧಾರದ ಮೇಲೆ ಕೆಲಸ ಮಾಡುತ್ತದೆ. ಇದು ಹೇಗೆಂದರೆ, ಒಬ್ಬ ವಿಜ್ಞಾನಿ ಒಂದು ಅತ್ಯಂತ ಸುಂದರವಾದ ಮತ್ತು ಅತ್ಯಂತ ಸಂಕೀರ್ಣವಾದ ಸಂಗತಿಯೆಡೆ ದುರುಗುಟ್ಟಿಕೊಂಡು ನೋಡುತ್ತಾನೆ. ಅದು ಅಷ್ಟು ಸುಂದರವಾಗಿದ್ದರೂ ಮತ್ತು ಜಟಿಲವಾಗಿದ್ದರೂ ಇದೆಲ್ಲ ಇದ್ದಕ್ಕಿದ್ದಂತೆ ಬಂದದ್ದು, ಇದರ ಹಿಂದೆ ಯಾರೂ ಪೂರ್ವಯೋಜನೆ ಮಾಡಿದ್ದಿಲ್ಲ; ಅವುಗಳ ಸೃಷ್ಟಿಯ ಹಿಂದೆ ಯಾವ ಉದ್ದೇಶವೂ ಇಲ್ಲ ಎನ್ನುತ್ತಾನೆ.

ಇಂತಹ ಆಲೋಚನೆಯನ್ನು ತಾನೇ ವಿಜ್ಞಾನವು ಕಾಲಕಾಲಕ್ಕೂ ಹೇಳಿಕೊಂಡು ಬರುತ್ತದೆ. ಬಣ್ಣಬಣ್ಣದ ಚಿಟ್ಟೆಯಿಂದ ಹಿಡಿದು, ಸಂಕೀರ್ಣ ಮಾನವನ ತನಕ, ಭೂಮಿಯ ಮೇಲಿರುವ ಸೃಷ್ಟಿ ಸೌಂದರ್ಯಮಯವಾಗಿದೆ ಮತ್ತು ಸಂಕೀರ್ಣತೆಯಿಂದ ಕೂಡಿದೆ. ಇಂತಹ ಸೃಷ್ಟಿಯನ್ನು ವಿಜ್ಞಾನ, ಕೋಟ್ಯಾನುಕೋಟಿ ವರ್ಷಗಳ ಹಿಂದೆ ರಸಾಯನಿಕ ವಸ್ತುಗಳು, ಆಕಸ್ಮಿಕವಾಗಿ ಒಂದು ಸರಳ ಜೀವಿಯಾಗಿ ಅಸ್ತಿತ್ವಕ್ಕೆ ಬಂತು. ನಂತರ ಗೊತ್ತುಗುರಿಯಿಲ್ಲದ ಮಾರ್ಪಾಟುಗಳಿಗೊಳಗಾಗಿ ಮತ್ತು ನೈಸರ್ಗಿಕ ಆಯ್ಕೆಯಿಂದ, ಇಂದು ಈ ಭೂಮಿಯ ಮೇಲೆ ಬದುಕುತ್ತಿರುವ ಮತ್ತು ಓಡಾಡುತ್ತಿರುವ ಹಾಗು ಉಸಿರಾಡುತ್ತಿರುವ ಜೀವಿಗಳಾಗಿ ವಿಕಾಸಗೊಂಡವು ಎಂಬ ವಿವರಣೆ ಕೊಡುತ್ತದೆ.

ದೇವರು, ಅಲೌಕಿಕ ಸೃಷ್ಟಿಕರ್ತನೆಂಬ ಆಲೋಚನೆಯೇ–ಅವೈಜ್ಞಾನಿಕವೆಂದು ಇಂದಿನ ವಿಜ್ಞಾನ ತರ್ಕಮಾಡುತ್ತದೆ. ಯಾಕೆಂದರೆ ಆತನನ್ನು ವೈಜ್ಞಾನಿಕವಾಗಿ ಪರೀಕ್ಷಿಸಿ ತಿಳಿದುಕೊಳ್ಳಲಾಗದು. ಆದ್ದರಿಂದ, ವಿಜ್ಞಾನ, ದೇವರೊಂದಿಗೆ ವ್ಯವಹರಿಸಲಾಗದು ಎಂಬ ಅಭಿಪ್ರಾಯವೂ ಉಂಟು. ಈ ಪೂರ್ವಕಲ್ಪನೆಯನ್ನು ವಿಜ್ಞಾನವೊಂದೇ ಬೋಧಿಸಲಾಗದು, ಆದರೆ ವಿಜ್ಞಾನಿಗಳು ತಾವೇ ಒಂದು ತಾರ್ಕಿಕ ಸ್ಥಿತಿಯನ್ನು ಈ ವಿಭಾಗದ ಮೇಲೆ ಹೊರಿಸಿದರು (ವಿಜ್ಞಾನ, ವಿಜ್ಞಾನಿಗಳ ತಾರ್ಕಿಕ ಬೋಧನೆಗೆ ವಿರುದ್ಧವಾದದ್ದನ್ನೇ ಬೋಧಿಸುತ್ತದೆ. ಅಂದರೆ ಪ್ರಪಂಚದ ಎಲ್ಲ ಸೌಂದರ್ಯ ಮತ್ತು ಸಂಕೀರ್ಣತೆ ತನ್ನ ಸೃಷ್ಟಿಕರ್ತನಾದ ದೇವರ ಕಡೆಗೇ ಬೊಟ್ಟುಮಾಡಿ ತೋರಿಸುತ್ತಿದೆ ಎನ್ನುತ್ತದೆ ವಿಜ್ಞಾನ).

ದೇವರು ಎಲ್ಲವನ್ನೂ ಸೃಷ್ಟಿ ಮಾಡಿದ್ದು ಮಾತ್ರವಲ್ಲ, ಎಲ್ಲವನ್ನೂ ಸಂರಕ್ಷಿಸುತ್ತಾನೆಂದು ಸತ್ಯವೇದ ಬೋಧಿಸುತ್ತದೆ. ಇದು ವಿಜ್ಞಾನಕ್ಕೆ ಸಮಸ್ಯೆಯಾಗಿ ತೋರಬಹುದು. ಆದ್ದರಿಂದ ಸಾಮಾನ್ಯ ವಿಜ್ಞಾನ ಏನು ಹೇಳುತ್ತದೆಯೋ ಅದಕ್ಕೆ ವಿರುದ್ಧವಾದ, ತನ್ನದೇ ಆದ, ಮೂಲಸ್ವರೂಪದಲ್ಲಿ ಬಹಳ ಭಿನ್ನವಾದ ಕಲ್ಪನೆಯೊಂದಿಗೆ ನಿಜವಾದ ಕ್ರೈಸ್ತ ಶಿಕ್ಷಣ ವಿಜ್ಞಾನ ಕೆಲಸಮಾಡಬೇಕಾಗುತ್ತದೆ. ವಿಶೇಷವಾಗಿ, ಎಲ್ಲದರ ಆರಂಭದ ವಿಷಯಕ್ಕೆ ಬಂದಾಗ, ಸಾಮಾನ್ಯ ವಿಜ್ಞಾನಕ್ಕೂ ಮತ್ತು ಕ್ರೈಸ್ತ ಶಿಕ್ಷಣ ಆಧಾರಿತ ವಿಜ್ಞಾನಕ್ಕೂ ನಡುವೆ ನಡೆಯುವ ಘರ್ಷಣೆಯನ್ನು ತಪ್ಪಿಸಲಿಕ್ಕಾಗದು.

**ಶುಕ್ರವಾರ** **ಡಿಸೆಂಬರ್ 4**

**ಹೆಚ್ಚಿನ ಚಿಂತನೆ :** ಎಲ್ಲದರ ವಿಷಯದಲ್ಲಿ ವಿಜ್ಞಾನ ಸರಿಯೆನಿಸಿದರೂ, ಆರಂಭದ (ಮೂಲದ) ವಿಷಯಕ್ಕೆ ಬಂದಾಗ, ತಪ್ಪುವುದಕ್ಕೆ ಎರಡು ಕಾರಣಗಳಿವೆ. ಮೊದಲನೆಯದು: ನೈಸರ್ಗಿಕ ಪ್ರಪಂಚವನ್ನು ಅಧ್ಯಯನ ಮಾಡುವ ವಿಜ್ಞಾನ, ಉತ್ತರಕ್ಕೆ ನೈಸರ್ಗಿಕ ಪ್ರಪಂಚದ ಹತ್ತಿರಕ್ಕೇ ಹೋಗಬೇಕು. ಎರಡನೆಯದಾಗಿದೆ: ವಿಜ್ಞಾನವು, ನಿಸರ್ಗದ ನಿಯಮಗಳು ಸ್ಥಿರವಾಗಿರಬೇಕೆಂದು ಊಹಿಸಿಕೊಳ್ಳುತ್ತದೆ. ಆದರೆ ಮೂಲಕ್ಕೆ (ಆರಂಭದ ಬಿಂದಿಗೆ) ಸಂಬಂಧಿಸಿದಂತೆ ಹೇಳುವುದಾದರೆ ಮೇಲಿನ ಎರಡು ಕಾರಣಗಳೂ ತಪ್ಪೇ.

ಮೊದಲನೇ ಕಾರಣ ತೆಗೆದುಕೊಳ್ಳೋಣ. ನಿಸರ್ಗದ ಘಟನೆಗಳಿಗೆ ನಿಸರ್ಗದ ಕಾರಣಗಳನ್ನು ಇದು ಎದುರು ನೋಡುತ್ತದೆ. ಉದಾ: ಅದು ಚಂಡಮಾರುತದ ಜಾಡು ಕಂಡುಹಿಡಿಯುವುದು ಸರಿಯಷ್ಟೇ, ಆದರೆ, "ಆದಿಯಲ್ಲಿ ದೇವರು ಆಕಾಶವನ್ನೂ ಭೂಮಿಯನ್ನೂ ಉಂಟುಮಾಡಿದನು" (ಆ.ಕಾ. 1:1) ಎಂದು ಪ್ರಾರಂಭವಾಗುವುದರ ಮೂಲವನ್ನು ವೈಜ್ಞಾನಿಕ ರೀತಿಯಲ್ಲಿ ಹುಡುಕುವುದು ನಿಷ್ಪ್ರಯೋಜಕ ಪ್ರಯತ್ನ ಎನ್ನುವುದಕ್ಕಿಂತ, ಬಹಳ ಕೆಟ್ಟ ಪ್ರಯತ್ನ ಎನ್ನಬೇಕಾದೀತು. ಅಲೌಕಿಕ ಆರಂಭ ಅಥವಾ ಮೂಲವನ್ನು ನಿರಾಕರಿಸುವ ವಿಜ್ಞಾನ, ಅದು ಹೇಗೆ, ಸಂಪೂರ್ಣ ಅಲೌಕಿಕ ಮೂಲವೇ ಆಗಿರುವುದನ್ನು ಕುರಿತು ಬೋಧಿಸಬಲ್ಲದು?

ಇನ್ನು ಎರಡನೇ ಕಾರಣ: ನಿಯಮಗಳು ಸ್ಥಿರವಾಗಿರಬೇಕು ಎಂಬುದನ್ನು ಕುರಿತು ಏನು ಹೇಳೋಣ? ಈ ಕಾರಣ ಅರ್ಥಪೂರ್ಣವಾಗಿದೆ. ಆದರೆ ರೋಮ 5:12ರಲ್ಲಿ– "ಈ ವಿಷಯ ಹೇಗೆಂದರೆ– ಒಬ್ಬ ಮನುಷ್ಯನಿಂದಲೇ ಪಾಪವೂ ಪಾಪದಿಂದ ಮರಣವೂ ಲೋಕದೊಂದಿಗೆ ಸೇರಿದವು; ಎಲ್ಲರು ಪಾಪ ಮಾಡಿದ್ದರಿಂದ ಮರಣವು ಹೀಗೆ ಎಲ್ಲರಲ್ಲಿಯೂ ವ್ಯಾಪಿಸಿತು". ಈ ವಾಕ್ಯ, ಆ ಕಾರಣಕ್ಕೆ ಹೊರತಾಗಿದೆ. ವಿಜ್ಞಾನವು, ಈಗ ಎದುರಿಸುತ್ತಿರುವ, ಯಾವುದಕ್ಕಿಂತಲೂ ನಿರಂತರವಾದ, ಹಾಗು ಗುಣಾತ್ಮಕವಾಗಿ ಭಿನ್ನವಾದ, ನೈಸರ್ಗಿಕ ಪರಿಸರವನ್ನು ಗ್ರಹಿಕೆ ಮಾಡಿಕೊಳ್ಳುವಂತೆ ಮಾಡುತ್ತದೆ. ಸಾವು ಅಸ್ತಿತ್ವದಲ್ಲಿಲ್ಲದ ಜಗತ್ತು, ಇಂದು, ನಾವು ಅಧ್ಯಯನ ಮಾಡಬಹುದಾದ ಯಾವುದಕ್ಕಿಂತಲೂ ಆಮೂಲಾಗ್ರವಾಗಿ ಭಿನ್ನವಾಗಿದೆ ಮತ್ತು ಆ ಜಗತ್ತು ಇಲ್ಲದಿದ್ದಾಗ, ಅದು, ಈ ಜಗತ್ತನ್ನು ಹೋಲುತ್ತದೆ ಎಂದು ಭಾವಿಸುವುದು ದೋಷಕ್ಕೆ ಕಾರಣವಾಗುತ್ತದೆ.

ಆದ್ದರಿಂದ, ವಿಜ್ಞಾನವು ಮೂಲವನ್ನು ತಪ್ಪಾಗಿ ಪಡೆಯುತ್ತದೆ. ಏಕೆಂದರೆ ಅದು ಸೃಷ್ಟಿಯ ಎರಡು ನಿರ್ಣಾಯಕ ಅಂಶಗಳನ್ನು ನಿರಾಕರಿಸುತ್ತದೆ: (1) ಅದರ ಹಿಂದಿನ ಅಲೌಕಿಕ ಶಕ್ತಿ ಮತ್ತು (2) ಈಗ ನಮ್ಮ ಮುಂದೆ ಇರುವ ಆಮೂಲಾಗ್ರ ಭೌತಿಕ ಸ್ಥಗಿತತೆ.

## ಚರ್ಚಿಸಬೇಕಾದ ಪ್ರಶ್ನೆಗಳು

1. ತರಗತಿಯಲ್ಲಿ ಸೌಂದರ್ಯದ ಪ್ರಶ್ನೆ ಕುರಿತು ಮಾತನಾಡಿರಿ. ಸೌಂದರ್ಯ ಎಂದರೇನು? ಅದನ್ನು ವ್ಯಾಖ್ಯಾನಿಸುವುದು ಹೇಗೆ? ಒಬ್ಬ ಕ್ರೈಸ್ತನಲ್ಲದವನಿಗಿಂತ, ಕ್ರೈಸ್ತನಾದವನು ಸೌಂದರ್ಯವನ್ನು ಭಿನ್ನವಾಗಿ ವ್ಯಾಖ್ಯಾನಿಸುತ್ತಾನೆ ಮತ್ತು ಅರ್ಥಮಾಡಿಕೊಳ್ಳುತ್ತಾನೆ ಹೇಗೆ?

2. ಅದ್ಭುತ ಸಂಶೋಧನೆಯನ್ನು ಸಮೃದ್ಧವಾಗಿ ಸರಿದೂಗಿಸಲು, ಕ್ರಿಸ್ತನು, ಅದ್ಭುತ ವಿಜ್ಞಾನಿಯಾಗಿ ಭೂಮಿಗೆ ಬರಬಹುದಿತ್ತು. ಒಬ್ಬ ಸಂಗೀತ ಪ್ರದರ್ಶಕನಾಗಿ ಎಲ್ಲ ಖ್ಯಾತಿಯನ್ನು ಗಳಿಸಬಹುದಾಗಿತ್ತು. ಆದರೆ ಅದಕ್ಕೆ ಬದಲಾಗಿ ಆತನು ಬಂದು ವಿನಮ್ರ ಕುಶಲಕರ್ಮಿಯಾಗಿ ತರಬೇತಿ

ಪಡೆದನು. ಜಗದುತ್ಪತ್ತಿಯಾಗುವಾಗ ಆತನು ಅಲ್ಲಿದ್ದನು, ಆದರೆ ಒಬ್ಬ ಅನಭಿಜ್ಞನಾಗಿ ತರಬೇತಿ ಪಡೆದುಕೊಂಡನು, ಮತ್ತು ತನ್ನ ಕರ್ತವ್ಯವನ್ನು ವಿಧೇಯತೆಯಿಂದ ಪೂರೈಸಿದ್ದನು. ನಮ್ಮ ಶೈಕ್ಷಣಿಕ ಅಥವಾ ವೃತ್ತಿಪರ ಪ್ರಯಾಣದಲ್ಲಿ ನಾವು ಎಲ್ಲೇ ಇರಲಿ, ಇದು ನಮಗೆ ಪ್ರೋತ್ಸಾಹ ನೀಡುತ್ತದೆ.

3. ಪ್ರತಿಯೊಬ್ಬ ಕ್ರೈಸ್ತನನ್ನು, ಶಾಲೆಗಳಲ್ಲಿ ಕಲಿಸಲು ಕರೆಯದಿದ್ದರೂ, ಉದ್ದೇಶ ಪೂರ್ವಕವಾಗಿ ಅಥವಾ ಸಂಪೂರ್ಣ ಅರಿವಿಲ್ಲದೆ, ಕ್ರೈಸ್ತರು, ಇತರರಿಗೆ ದೇವರ ವಾಕ್ಯದ ಮೂಲಕ ಮತ್ತು ದೇವರ ಸೇವೆಯ ಮೂಲಕ ಹೇಗೆ ಬೋಧಿಸಬಹುದು? ಕ್ರಿಸ್ತನ ಒಬ್ಬ ವಿದ್ಯಾರ್ಥಿಯಾಗಿಯೋ ಮತ್ತು ಪ್ರಪಂಚದ ಒಬ್ಬ ಶಿಕ್ಷಕನಾಗಿಯೋ ಯಾವ ಅಭ್ಯಾಸಗಳನ್ನು ಕ್ರೈಸ್ತನೊಬ್ಬ ಬೆಳೆಸಿಕೊಳ್ಳಬೇಕು?